**O.S. 61/2020**
**P.W.-1**



<u>ಸಾಕ್ಷಿಯನ್ನು ದಿನಾಂಕ **23-06-2025** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು:- ಪ್ರತಿವಾದಿ ಪರ ಶ್ರೀ ಟಿ.ಎಸ್.ಆರ್. ವಕೀಲರಿಂದ.</u>

ನಾನು ಮೂಲತಃ ಹಾಸನ ಜಿಲ್ಲೆ ಬೇಲೂರು ತಾಲ್ಲೂಕಿನ ವಿ. ಸೋಮೇಶ್ವರ ಗ್ರಾಮದವನಾಗಿರುತ್ತೇನೆ. ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿದ ನಾನು ವಾಸ ಮಾಡುತ್ತಿದ್ದೆ. ನಾನು ನಿವೃತ್ತಿ ಸಮಯದಲ್ಲಿ ಸರ್ಕಾರಿ ಪ್ರೌಢಶಾಲೆಯಲ್ಲಿ ಶಿಕ್ಷಕನಾಗಿ ಕೆಲಸ ಮಾಡತ್ತಿದ್ದೆ. ನಾನು ಮೇ 2017 ರಲ್ಲಿ ನಿವೃತ್ತಿ ಹೊಂದಿರುತ್ತೇನೆ. ನನ್ನ ಹೆಂಡತಿ ಭಾನುಮತಿಯಾಗಿದ್ದು ಅವರು ಎಲ್.ಐ.ಸಿ. ಏಜೆಂಟರು ಆಗಿರುತ್ತಾರೆ. 2016 ನೇ ಇಸವಿಯಲ್ಲಿ ನನ್ನ ಮಗ ಬೆಂಗಳೂರಿನ ಸ್ಟಾಫ್ಟ್ ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. 2018 ಇಸವಿಯಲ್ಲಿ ನಾನು ಚಿಕ್ಕಮಂಗಳೂರಿನಲ್ಲಿ ಒಂದು ಹೌಸಿಂಗ್ ಬೋರ್ಡ್ ಅನ್ನು ರೂ. 24/- ಲಕ್ಷಕ್ಕೆ ಖರೀದಿ ಮಾಡಿರುತ್ತೇನೆ. ನಾನು 2018-19 ನೇ ಇಸವಿಯಲ್ಲಿ ಬ್ಯಾಂಕ್ ನಲ್ಲಿ ಸಾಲ ಪಡೆದು ಒಂದು ಕ್ರಟಾ ಕಾರ್ ಖರೀದಿ ಮಾಡಿರುತ್ತೇನೆ. ನಾನು ಸಾಗರ ಮತ್ತು ತೀರ್ಥಹಳ್ಳಿ ಸುತ್ತ ಮುತ್ತ ಜನರಿಗೆ ಬಡ್ಡಿಗೆ ಹಣ ನೀಡಿರುತ್ತೇನೆ ಎಂದರೆ ಸರಿ ನಾನು ನಿವೃತ್ತಿಯಾದಾಗ ಸುಮಾರು ರೂ.50/-ಲಕ್ಷ ಬಂದಿರುತ್ತದೆ. ನಾನು ನಿವೃತ್ತಿ ಹೊಂದ ನಂತರ ಆದಾಯ ತೆರಿಗೆ ಪಾವತಿ ಮಾಡುತ್ತೇನೆ.

ನಿ.ಪಿ.-1 ಅನ್ನು ಬರೆಯಲು ಮಾತುಕತೆ ಬೆಳಿಗ್ಗೆ 08-00 ರಿಂದ 09-00 ಗಂಟೆ ಸಮಯದಲ್ಲಿ ಸಾಗರದ ನಮ್ಮ ಮನೆಯಲ್ಲಿ ಆಗಿರುತ್ತದೆ. ಆ ಸಮಯದಲ್ಲಿ ರಾಘವೇಂದ್ರ ಜಿ. ಮತ್ತು ಉದಯ ರವಿ ಹಾಜರಿದ್ದರು. ರಾಘವೇಂದ್ರ ರವರ

ಪರಿಚಯ ಇರುತ್ತದೆ. ಅವರನ್ನು ಪ್ರತಿವಾದಿ ಪರ ಬಂದಿರುತ್ತಾರೆ. ಉದಯರವಿ ಅವರ ಪರಿಚಯ ನನಗೆ ಇರಲಿಲ್ಲ. ಅವರನ್ನು ಸಹ ಪ್ರತಿವಾದಿ ಕರೆ ತಂದಿರುತ್ತಾರೆ. ರಾಘವೇಂದ್ರರವರು ಸಾಗರದ ವಾಸಿ ಮತ್ತು ಉದಯರವಿರವರು ಮಾಸೂರು ಗ್ರಾಮದವರು. ಪ್ರತಿವಾದಿ ಮಾಹಿತಿ ನೀಡಿದಂತೆ ನಾನು ನಿ.ಪಿ.-1 ಅನ್ನು ಬರೆದಿರುತ್ತೇನೆ. ಪ್ರತಿವಾದಿ ಮನೆಗೆ ಬರುವಾಗ ನಿ.ಪಿ.-1 ರ ಛಾಪಾ ಕಾಗದ ತಂದಿರುತ್ತಾರೆ. ಮಾತುಕತೆ ಸುಮಾರು 09-30 ಗಂಟೆಗೆ ಮುಗಿದಿರುತ್ತದೆ. ನಾನು ಹಕ್ಕಿನ ದಾಖೆಗಳು, ನಿವೇಶನದ ದಾಖಲಾತಿಗಳು, ನಕಾಶೆಯನ್ನು ನೋಡ್ಡಿರುತ್ತೇನೆ. ಆ ಸಂದರ್ಭದಲ್ಲಿ ಖಾತೆ ಆಗಿರಲಿಲ್ಲ. ಜಮೀನು ಬೇರೆ ಹೆಸರಿನಲ್ಲಿ ಇತ್ತು, ಪ್ರತಿವಾದಿ ನಾನು ಖರೀದಿ ಮಾಡಿರುತ್ತೇನೆ ಎಂದು ಹೇಳಿರುತ್ತಾರೆ. ನಾನು ಖರೀದಿ ಮಾಡುವ ಆಸ್ತಿಯನ್ನು ನೋಡಿರುತ್ತೇನೆ. ಒಪ್ಪಂದ ಸಮಯದಲ್ಲಿ ನಾನು ಹೋಗಿ ನೋಡಿರುತ್ತೇನೆ. ದಿನಾಂಕ 02-06-2018 ರಂದು ರೂ.40 ಲಕ್ಷದ 50 ಸಾವಿರ ಹಣವನ್ನು ಮನೆಯಲ್ಲಿ ನೀಡಿರುತ್ತೇನೆ. ಸದರಿ ಹಣ ನಗದು ರೂಪದಲ್ಲಿ ನಾನು ಮನೆಯಲ್ಲಿ ಇಟ್ಟುಕೊಂಡಿರುತ್ತೇನೆ. ನಾನು ಹಣವನ್ನು ಬ್ಯಾಂಕ್ ನಿಂದ ಪಡೆದಿರುತ್ತೇನೆ. ನಾನು ಜಮೀನ್ದಾರನಾಗಿದ್ದು ಮೆಣಸು, ಕಾಫಿ ಮತ್ತು ಸಿಲ್ವರ್ ವುಡ್ ಅನ್ನು ಮಾರಾಟ ಮಾಡಿರುತ್ತೇನೆ. ಅದನ್ನು ಯಾರಿಗೆ ಮಾರಾಟ ಮಾಡಿರುತ್ತೇನೆ ಎಂದು ನಿಖರವಾಗಿ ಹೇಳಲಾಗುವುದಿಲ್ಲ. ನನ್ನ ಹೆಸರಿನಲ್ಲಿ ಜಮೀನು ಇದೆ ಎಂದು ತೋರಿಸಲು ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಆದರೆ ಹಾಜರು ಪಡಿಸಬಲ್ಲೆ. ನಮ್ಮ ಕುಟುಂಬದಲ್ಲಿ ಸುಮಾರು 16-17 ಎಕರೆ ಜಮೀನು ಇರುತ್ತದೆ. ನಿ.ಪಿ.-1 ರ ಸಾಕ್ಷಿಗಳನ್ನು ವಿಚಾರಣೆ ಮಾಡಬಹುದಾ ಎಂದರೆ ನಾನು ಅದನ್ನು ಹೇಳಲಾಗುವುದಿಲ್ಲ ನ್ಯಾಯಾಲಯ ಅದನ್ನು ವಿಚಾರಣೆ

ಮಾಡಬಹುದು. ಸಾಕ್ಷಿ ಮುಂದುವರೆದು ನಾನು ವಿಚಾರಣೆ ಮಾಡಿಸುತ್ತೇನೆ ಎನ್ನುವರು.

ನಿವೇಶನ ಸಂಖ್ಯೆ 41, 2015 ನೇ ಇಸವಿಯಲ್ಲಿ ಬೇರೆಯವರಿಗೆ ಮಾರಾಟವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ ಎನ್ನುವರು. ನಿ.ಪಿ.-1 ರ ಮೊದಲನೇ ಪುಟಕ್ಕೆ ನಾನು ಪ್ರತಿವಾದಿಯರಿಂದ ಸಹಿ ಪಡೆಯಲು ತೊಂದರೆ ಇರಲಿಲ್ಲ ಎಂದರೆ ಸರಿ. ನಿ.ಪಿ.-1 ಅನ್ನು ನೋಂದಣಿ ಮಾಡಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಶೀಘ್ರ ಕಾಲದಲ್ಲೇ ಕ್ರಯ ಪತ್ರ ಮಾಡಿಸಿಕೊಡುತ್ತೇನೆ ಎಂದು ಹೇಳಿರುತ್ತಾರೆ ಆ ಕಾರಣ ನೋಂದಣಿ ಮಾಡಿಸಿರುತ್ತೇನೆ. ನಿ.ಪಿ.-1 ರಲ್ಲಿ ಹಣವನ್ನು ನಗದಾಗಿ ನೀಡಿದ ಬಗ್ಗೆ ನಿಖರವಾಗಿ ನಮೂದಾಗಿರುವುದಿಲ್ಲ ಎಂದರೆ ಸರಿ. ಅದರಲ್ಲಿ ನಗದು ಎಂದು ನಮೂದು ಮಾಡದೇ ಹೋಗಲು ಏನು ಕಾರಣ ಎಂದರೆ? ಸಾಕ್ಷಿ ಪ್ರತಿವಾದಿ ನೀಡಿದ ಮಾಹಿತಿಯಂತೆ ನಾನು ಬರೆದಿರುತ್ತೇನೆ. ನಾನು ಮೇಲೆ ಹೇಳಿರುವಂತೆ ಹೇಳಿರುವ ದಾಖಲೆಗಳನ್ನು ನಾನು ಪಡೆದಿರುತ್ತೇನೆ, ಅದು ನನ್ನ ಬಳಿ ಇರುತ್ತದೆ. ನಿ.ಪಿ.-1 ಅನ್ನು ನಾನು ಯಾವ ವಾರ ಬರೆಯಲಾಗಿರುತ್ತದೆ ಎಂದು ನಾನು ಹೇಳಲಾಗುವುದಿಲ್ಲ. ದಿನಾಂಕ 02-06-2018 ರಂದು ದಾವಾ ಸ್ವತ್ತುಗಳನ್ನು ಮಾರಾಟ ಮಾಡುತ್ತೇನೆ ಎಂದು ಹೇಳಿ ಪ್ರತಿವಾದಿ ಯಾವುದೇ ಹಣ ಪಡೆದುಕೊಂಡಿರುವುದಿಲ್ಲ ಮತ್ತು ನಿ.ಪಿ.-1 ಅನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿ. ನಿ.ಪಿ.-1(ಎ) ಪ್ರತಿವಾದಿಯ ಸಹಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.-1 ಅನ್ನು ನಾನು ಮತ್ತು ಸಾಕ್ಷಿಗಳೆಲ್ಲಾ ಸೇರಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿ ನೀಡಿರುವ ಚೆಕ್ ನಲ್ಲಿ ಆತನ ಸಹಿ

ಇರುತ್ತದೆ. ಆತನ ಹೊರತುಪಡಿಸಿ ಆತನ ಸಹಿ ಇರುವ ದಾಖಲೆಗಳು ಬೇರೆ ಯಾವುದು ಇರಲಿಲ್ಲ.

ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

(ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸಾಗರ.